**ಸಾಕ್ಷಿಯನ್ನು ದಿಃ 09.07.2025 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ**

1. ನಿಂಗೇಗೌಡರ ಮಗ ಕಾಳೇಗೌಡ ನನ್ನ ದೊಡ್ಡಪ್ಪ ಆಗಬೇಕು. ಕಾಳೇಗೌಡರ ಮಗ ದಶರಥ ನನಗೆ ದೊಡ್ಡಪ್ಪನ ಮಗ ಆಗಬೇಕು.

2. ನಿಂಗೇಗೌಡರ ಮಗ ಚಿಕ್ಕೇಗೌಡ ನನ್ನ ತಂದೆ. ಚಿಕ್ಕೇಗೌಡರ ಮಗ ಜಗದೀಶ ಎಂದರೆ ನಾನು.

3. ಸಾಕ್ಷಿಗೆ ದಿಃ 22.02.1989 ರ ಒಂದು ನೊಂದಾಯಿತ ಕ್ರಯಪತ್ರವನ್ನು ತೋರಿಸಿ, ಅದರಲ್ಲಿ ನಿಮ್ಮ ಹಾಗೂ ನಿಮ್ಮ ತಂದೆಯ ಸಹಿ ಇದೆ ಎಂದರೆ ಸರಿ. ಸದರಿ ದಾಖಲೆಯನ್ನು ನಿಡಿ - 1 ಎಂದು ಗುರುತಿಸಲಾಯಿತು.

4. ಚಿಕ್ಕೇಗೌಡರಿಗೆ ಶೋಭ ಹಾಗೂ ಪ್ರೇಮಾ ಎಂಬ ಹೆಣ್ಣು ಮಕ್ಕಳಿದ್ದು, ಅವರು ನನ್ನ ಸಹೋದರಿಯರು. ಅವರುಈ ದಾವೆಯಲ್ಲಿ ಪಕ್ಷಗಾರರಿಲ್ಲ.

5. ಈ ದಾವೆಯಲ್ಲಿ ನನ್ನ ತಮ್ಮ ರಮೇಶ ರವರು ಪಕ್ಷಗಾರರಾಗಿದ್ದಾರೆ ಎಂದರೆ ಸರಿ. ಅವರು ಸಹ ಸಾಕ್ಷಿ ಹೇಳಿರುತ್ತಾರೆ ಎಂದರೆ ಸರಿ.

6. ನೀವು ಹೇಳುವಂತೆ ರುದ್ರಪ್ಪನವರಿಗೆ ನಿಮ್ಮ ತಂದೆ ವಾರಕ್ಕೆ ಕೊಟ್ಟು ಎಷ್ಟು ವರ್ಷವಾಯಿತು ಎಂದರೆ, 20 ವರ್ಷ ಆಗಿದೆ. ಸದರಿ ವಿಚಾರವನ್ನು ನಿಮ್ಮ ದಾವೆ ಹಾಗೂ ತಕರಾರಿನಲ್ಲಿ ಹೇಳಿದ್ದೀರಾ ಎಂದರೆ, ಇಲ್ಲ.

7. 1989 ರಿಂದಲೂ ಪಹಣಿ ಬೇರೆಯವರ ಹೆಸರಿನಲ್ಲಿದೆ ಎಂದರೆ ಸರಿ.

8. ರುದ್ರಪ್ಪನವರಿಂದ ವಿಭಾಗವಾಗಿ ಪ್ರತಿವಾದಿ ಶಿವಾನಂದವರಿಗೆ ಹೋಗಿದೆ ಎಂದರೆ, ಮೋಸದಿಂದ ಮಾಡಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ.

9. ನೀವು ಯಾವುದೇ ದಾಖಲಾತಿಗೆ ಸಹಿ ಹಾಕಬೇಕಾದರೆ ನೋಡಿ, ಓದಿ ಸಹಿ ಮಾಡುತ್ತೀರಾ ಎಂದರೆ, ಸಾಕ್ಷಿಯಾಗಿ ಸಹಿ ಹಾಕುವಂತೆ ಹೇಳಿದ್ದರಿಂದ ಮಾಡಿದೆ ಎಂದು ನುಡಿಯುತ್ತಾರೆ.

10. ನನ್ನ ಪ್ರಮಾಣ ಪತ್ರಕ್ಕೆ ನಾನು ಓದಿಯೇ ಸಹಿ ಮಾಡಿರುತ್ತೇನೆ.

11. ಮೋಸದಿಂದ ಖಾತೆ ಮಾಡಿಕೊಂಡ ವಿಚಾರ ನಮಗೆ 2018 ರಲ್ಲಿ ಗೊತ್ತಾಗಿರುತ್ತದೆ. ಸದರಿ ಖಾತೆ ರದ್ದುಪಡಿಸುವಂತೆ ನಾವು ಎಲ್ಲಿಗೂ ಅರ್ಜಿ ಹಾಕಿಲ್ಲ.

12. 25-30 ವರ್ಷದಿಂದ ದಾವಾ ಆಸ್ತಿಗೆ ನಾನು ಕಂದಾಯ ಕಟ್ಟಿಲ್ಲ. ಸ್ವಾಧೀನ ಬಿಟ್ಟುಕೊಡುವಂತೆ ನಾವು ಪ್ರತಿವಾದಿಯನ್ನು ಕೇಳಿದ್ದನ್ನು ನೋಡಿದವರು ಯಾರೂ ಇಲ್ಲ.

13. ದಾವಾ ಆಸ್ತಿ ಹಾಗೂ ಸ.ನಂ.27 ನ್ನು ದಿಃ 22.02.1989 ರಲ್ಲಿ ಕಾಳೇಗೌಡ, ಅವರ ಮಗ ದಶರಥ ಹಾಗೂ ನಿಮ್ಮ ತಂದೆ ಮತ್ತು ನೀವು ಸೇರಿಕೊಂಡು ಪಿ.ಆರ್.ಸದಾಶಿವಪ್ಪ ನವರಿಗೆ ಕ್ರಯಪತ್ರ ಮಾಡಿದ್ದೀರಾ ಎಂದರೆ, ಸ.ನಂ.27 ನ್ನು ಮಾತ್ರ ಮಾಡಿದ್ದೇವೆ ಎಂದು ನುಡಿಯುತ್ತಾರೆ.

14. ನಿಡಿ - 1 ರಲ್ಲಿ ಸುಳ್ಳು ಬರೆದಿದ್ದಾರಾ ಎಂದರೆ, ನಾನು ಓದಿಲ್ಲ ಎಂದು ನುಡಿಯುತ್ತಾರೆ.

15. ಸ.ನಂ.27 ನ್ನು ಮಾತ್ರ ಬರೆದುಕೊಟ್ಟ ಬಗ್ಗೆ ನಾವು ವಾರಕ್ಕೆ ಕೇಳಲು ಹೋದಾಗ 2018 ರಲ್ಲಿ ಗೊತ್ತಾಗಿರುತ್ತದೆ.

16. ದಾವಾ ಆಸ್ತಿ ಸದಾಶಿವಪ್ಪ ನವರಿಗೆ ಹೋಗಿ ಅವರೇ ಸ್ವಾಧೀನದಲ್ಲಿದ್ದರು ಎಂದರೆ, ನನ್ನ ತಂದೆ ವಾರಕ್ಕೆ ನೀಡಿದ್ದರು ಎಂದು ನುಡಿಯುತ್ತಾರೆ. ಸದರಿ ವಿಚಾರ ನನಗೂ ಸಹ ಗೊತ್ತು.

17. ಸದಾಶಿವಪ್ಪನವರಿಗೆ ಖಾತೆ ಹೋದ ನಂತರ ಅವರ ಸಹೋದರರು ದಿಃ 11.10.1999 ರಿಲ್ಲ ನೊಂದಾಯಿತ ವಿಭಾಗ ಪತ್ರ ಮಾಡಿಕೊಂಡು ಆ ಪ್ರಕಾರ ದಾವಾ ಆಸ್ತಿ ಹಾಗೂ ಇತರ ಆಸ್ತಿಗಳು ಪ್ರತಿವಾದಿ ಪಾಲಿಗೆ ಬಂದಿವೆ ಎಂದರೆ, ವಾರಕ್ಕೆ ಕೊಟ್ಟಿದ್ದೆವು ಎಂದು ನುಡಿಯುತ್ತಾರೆ.

18. 1999 ರಿಂದ ದಾವಾ ಆಸ್ತಿಯಲ್ಲಿ ಪ್ರತಿವಾದಿಯೇ ಸ್ವಾಧೀನದಲ್ಲಿದ್ದಾರೆ ಎಂದರೆ ಸರಿ, ವಾರಕ್ಕೆ ಕೊಟ್ಟಿದ್ದೆವು ಎಂದು ನುಡಿಯುತ್ತಾರೆ.

19. ದಾವಾ ಆಸ್ತಿಯನ್ನು ಪ್ರತಿವಾದಿ ತುಂಬಾ ಹಣ ಖರ್ಚು ಮಾಡಿ ತೆಂಗಿನ ಮರ ಹಾಕಿ ಅಭಿವೃದ್ಧಿಪಡಿಸಿದ್ದಾರೆ ಎಂದರೆ, ವಾರಕ್ಕೆ ನೀಡಿದ್ದರಿಂದ ಮಾಡಿದ್ದಾರೆ ಎಂದು ನುಡಿಯುತ್ತಾರೆ.

20. ತೆಂಗಿನ ಮರ ಎಷ್ಟು ವರ್ಷದಿಂದ ಇವೆ ಎಂದರೆ, 15-20 ವರ್ಷ ಆಗಿರಬಹುದು. ಶೆಡ್ ಮನೆಗಳನ್ನು ಸಹ ಕಟ್ಟಿದ್ದಾರೆ ಎಂದು ನುಡಿಯುತ್ತಾರೆ. ಸದರಿ ಮನೆಗಳನ್ನು ಕಟ್ಟಿ 10 ವರ್ಷ ಆಗಿದೆ. ಸದರಿ ವಿಚಾರವನ್ನು ನಮ್ಮ ವಕೀಲರಿಗೆ ಹೇಳಿಲ್ಲ.

21. ದಾವಾ ಆಸ್ತಿಯನ್ನು ಲಪಟಾಯಿಸಲು ಕ್ರಯಪತ್ರ ಮಾಡಿಕೊಂಡಿದ್ದರೂ ಸಹ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದಂತೆ ನನ್ನ ಉಕ್ತಲೇಖದಂತೆ ಬೆರಳಚ್ಚು ಮಾಡಲಾಯಿತು.) ಓ ಹೇ ಕೇ ಸ ಇ ಒ

ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ
ಪಿರಿಯಾಪಟ್ಟಣ